
# ಗೋಡೆಗೆ ತಳ್ಳಿಸಿಕೊಂಡ ಮನುಷ್ಯ ಮತ್ತು ಆತನ ತೀರ್ಪು



ನಾಲ್ಕನೇ ಆಯಾಮ

ಪದ್ಮರಾಜ ದಂಡಾವತಿ

ಗೋಡೆಗೆ ತಳ್ಳಿಸಿಕೊಂಡ ಮನುಷ್ಯ ಏನು ಮಾಡುತ್ತಾನೆ? ಹಿಂದೆ ಹೋಗಲು ಸಾಧ್ಯವೇ ಇಲ್ಲ. ಮುಂದೆ ಬರಲೂ ಆಗದು. ಭಾರತದ ರೈತ ಈಗ ಇಂಥ ಸ್ಥಿತಿಯಲ್ಲಿ ಇದ್ದಾನೆ.

ಮೊನ್ನೆ ಚಾಮರಾಜನಗರದಲ್ಲಿ ಆದ ಘಟನೆ ನಿಮಗೆ ನೆನಪಿರಬೇಕು. ಮತ್ತೆ ಮತ್ತೆ ಮುಂದೆ ಬರಲು ರೈತ ಮಾಡುತ್ತಿರುವ ಪ್ರಯತ್ನಕ್ಕೆ ಅದು ಸಂಕೇತ. ಆದರೆ, ದೊಣ್ಣೆ ಹಿಡಿದ ಪೊಲೀಸರು, ಜಿಲ್ಲಾಧಿಕಾರಿಗಳು 'ಮುಂದೆ ಹೆಜ್ಜೆ ಇಟ್ಟರೆ ಎಚ್ಚರ' ಎಂದು ತಾಕೀತು ಮಾಡುತ್ತಿದ್ದಾರೆ. ಇದಕ್ಕಿಂತ ಸ್ವಲ್ಪ ಹಿಂದೆ ಹಾವೇರಿಯಲ್ಲಿ ನಡೆದ ಘಟನೆಯೂ ನಿಮಗೆ ನೆನಪಿರಬಹುದು. ಪೊಲೀಸರ ಎಚ್ಚರ ಮುರಿದು ಮುಂದೆ ಹೆಜ್ಜೆ ಇಟ್ಟ ರೈತರ ಗತಿ ಏನಾಯಿತು?

ವಿಪರ್ಯಾಸ ಎಂದರೆ ದೇಶದಲ್ಲಿ ಹಸಿರು ಕ್ರಾಂತಿ ಮಾಡಿ ಹೆಮ್ಮೆ ಪಟ್ಟ ಗಳಿಗೆಯಲ್ಲಿಯೇ ರೈತರ ಆತ್ಮಹತ್ಯೆಯೂ ಆರಂಭವಾಯಿತು. ಇದಾಗಿ ನಾಲ್ಕು ದಶಕಗಳೇ ಕಳೆದು ಹೋಗಿವೆ. ಆಗಲೇ ಗೋಡೆಗೆ ತಳ್ಳಿಸಿಕೊಂಡ ಮನುಷ್ಯನಾಗಿದ್ದ ರೈತ ಶಕ್ತಿ ಕೂಡಿಸಿಕೊಂಡು ಮುಂದೆ ಬರಲು ಪ್ರಯತ್ನ ಮಾಡುತ್ತಲೇ ಇದ್ದಾನೆ. ಆತನಿಗೆ ಇದೊಂದು ರಥಮುಸಲದಂಥ ಸಂದರ್ಭ. ರಥದ ಹೊರಗೆ ಎಲ್ಲೆಂದರಲ್ಲಿ ಖಡ್ಗ ಚಾಚಿಕೊಂಡಿವೆ. ಖಡ್ಗ ಹಿಡಿದ ಮನುಷ್ಯ ಯಾರು, ಎಲ್ಲಿದ್ದಾನೆ ಎಂದು ರಣಗರಂಗದ ಯೋಧನಿಗೆ ತಿಳಿಯುತ್ತಿಲ್ಲ. ತಿಳಿದರೂ ಎದುರಿಸುವ ಶಕ್ತಿ ಇಲ್ಲ. ಚಕ್ರವ್ಯೂಹದಲ್ಲಿ ಸಿಲುಕಿದ ಅಭಿಮನ್ಯುವಿಗೆ ಆದ ಹಾಗೆ ರೈತನ ಒಂದೊಂದೇ ಕೈ, ಕಾಲುಗಳನ್ನು ಕಾಣದ ಕೈಗಳು ಕತ್ತರಿಸಿ ಹಾಕುತ್ತಿವೆ.

ಹಸಿರು ಕ್ರಾಂತಿಗಿಂತ ಮುಂಚೆ ರೈತ ಸ್ವಾವಲಂಬಿಯಾಗಿದ್ದ. ತನ್ನ ಬಿತ್ತನೆ ಬೀಜಗಳನ್ನು ತಾನೇ ಬೆಳೆಯುತ್ತಿದ್ದ. ಬೇಕಾದ ಗೊಬ್ಬರ ಕೊಟ್ಟಿಗೆಯಲ್ಲಿಯೇ ಸಿದ್ಧವಾಗುತ್ತಿತ್ತು. ಹೊಲದಲ್ಲಿ ಬೆಳೆದ ಕಾಳಿಗೆ ಕೀಟಗಳ ಕಾಟ ಇರಲಿಲ್ಲ. ವರ್ಷಕ್ಕೆ ಒಂದು ಬೆಳೆ ತೆಗೆದು ಶಕ್ತಿಯುತ ಆಹಾರ ಸೇವಿಸಿ ತಾನೂ ಗಟ್ಟಿಯಾಗಿದ್ದ, ತನ್ನ ಪೀಕಿನ ಮೇಲೆ ಅವಲಂಬಿಸಿದ ಸುತ್ತಲಿನ ಸಮಾಜವನ್ನೂ ಆರೋಗ್ಯ ಪೂರ್ಣವಾಗಿ ಇರಿಸಿದ್ದ. ಈಗ ಆತನ ಸ್ವಾವಲಂಬನೆ ಹೊರಟು ಹೋಗಿದೆ. ರೈತ ನಂಬಿದ್ದ ಮಣ್ಣು ಈಗ ಬರಡಾಗಿದೆ. ಎದೆಯುದ್ದ ಬಿರುಸಾಗಿ ಬೆಳೆದು ನಿಲ್ಲುತ್ತಿದ್ದ ಜೋಳದ ಪೈರು ಈಗ ಎಲ್ಲಿ ಇವೆ? ಹತ್ತು ಮಕ್ಕಳನ್ನು ಹಡೆದ ಹೆಣ್ಣಿನ ಹಾಗೆ ಭೂಮಿ ವರ್ಷಕ್ಕೆ ಮೂರು ಬೆಳೆ ಬೆಳೆದು ಪೀಚಾಗಿ ಹೋಗಿದೆ. ಬೀಜಕ್ಕಾಗಿ, ಗೊಬ್ಬರಕ್ಕಾಗಿ, ಬೆಳೆದ ಬೆಳೆಗೆ ಒಳ್ಳೆಯ ಬೆಲೆಗಾಗಿ ರೈತ ನಿತ್ಯ ಹೋರಾಡಬೇಕಾಗಿದೆ. ದೇಶದ ಅತ್ಯಂತ ಫಲವತ್ತಾದ ಭೂಮಿ ಹೊಂದಿದ್ದ ಪಂಜಾಬಿನಲ್ಲಿ ಹಸಿರು ಕ್ರಾಂತಿ ವೇಳೆಯಲ್ಲಿಯೇ ರೈತರ ಆತ್ಮಹತ್ಯೆಯ ಪ್ರಮಾಣ ನಾಲ್ಕರಷ್ಟು ಹೆಚ್ಚಿತು. ಈಗ ರೈತರು ಎಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ? ಅದು ಬಿಟ್ಟು ಆತನಿಗೆ ಪರ್ಯಾಯ ಏನು ಇದೆ?

ಇದು ದುರಂತ. ಇದಕ್ಕೆ ಉತ್ತರ ಕಂಡುಕೊಳ್ಳಲು ರೈತರು ಕರ್ನಾಟಕದಲ್ಲಿ ಒಟ್ಟುಗೂಡಿದ್ದು 80ರ ದಶಕದ ಆಸುಪಾಸಿನಲ್ಲಿ. ಲಕ್ಷಗಟ್ಟಲೆ ರೈತರು ಬೆಂಗಳೂರಿಗೆ ಬಂದು ಕಬ್ಬನ್‌ಪಾರ್ಕಿನಲ್ಲಿ ಪ್ರತಿಭಟನೆ ಮಾಡಿದರೆ ಸರ್ಕಾರ ನಡುಗಿ ಹೋಗುತ್ತಿತ್ತು. ಅನೇಕ ಸಾರಿ ಸಚಿವರೇ ಈ ರ್‍ಯಾಲಿಯ ಕೊನೆಯಲ್ಲಿ ಭಾಗವಹಿಸಿ ರೈತರಿಗೆ ಸಮಾಧಾನ ಮಾಡಿದ ಸಂದರ್ಭಗಳು ನಮ್ಮ ನೆನಪಿನಿಂದ ಮಾಸಿ ಹೋಗಿಲ್ಲ. ಆದರೆ, ರೈತ ಸಂಘ ಛಿದ್ರಛಿದ್ರವಾಗಿ ಒಡೆದು ಹೋದ ನಂತರ ಈಗ ರೈತರ ಬಳಿ ಉಳಿದುದು ಬರೀ ಹಸಿರು ಶಾಲು ಮಾತ್ರ.

ಕಾಲದ ತುಳಿತಕ್ಕೆ ಸಿಲುಕಿ ಮಾಸಿ ಹೋಗಿರುವ ಶಾಲಿನಲ್ಲಿ ಪ್ರತಿಭಟನೆಯ ಕಾವು ಒಂದು ಚೂರೂ ಉಳಿದಿಲ್ಲ. ರೈತ ಸಂಘಟನೆ ಮತ್ತೆ 80ರ ದಶಕಕ್ಕೆ ಹೋಗಲು ಸಾಧ್ಯವಿಲ್ಲ ಎನಿಸುತ್ತದೆ. ಪ್ರತಿಭಟನೆಯಿಂದ ಅಥವಾ ಆತ್ಮಹತ್ಯೆಯಿಂದ ತನ್ನ ಸಮಸ್ಯೆಗಳಿಗೆ ಈಗ ಆತ ಉತ್ತರ ಕಂಡುಕೊಳ್ಳಲೂ ಸಾಧ್ಯವಿಲ್ಲ.

ಹಾಗಾದರೆ ಏನು ಮಾಡಬೇಕು? ಇದು ಉತ್ತರವಿಲ್ಲದ ಪ್ರಶ್ನೆ. ಮಿಶ್ರತಳಿ ಬೀಜ, ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನೆಲ್ಲ ಬಿಟ್ಟು ಈಗ ಕೃಷಿ ಮಾಡಲು ಸಾಧ್ಯವಿದೆಯೇ? ಬಹುತೇಕ ಸಾಧ್ಯವಿಲ್ಲ ಎನ್ನುವಂಥ ಒಂದು ಸಂದರ್ಭವನ್ನು ಬಹುರಾಷ್ಟ್ರೀಯ ಕಂಪೆನಿಗಳು ನಿರ್ಮಾಣ ಮಾಡಿವೆ. ಇಂಥ ಒಂದು ಸಂದರ್ಭವನ್ನು ಎದುರಿಸಲು ಕೃಷಿ ಸಂಶೋಧನೆಯೂ ಆತನ ನೆರವಿಗೆ ಬರುತ್ತಿಲ್ಲ. ಹಾಗೆ ನೋಡಿದರೆ ಪ್ರಯೋಗಾಲಯದ ಸಂಶೋಧನೆಗೂ, ಹೊಲದ ವಾಸ್ತವಕ್ಕೂ ಅರ್ಥಾತ್ ಸಂಬಂಧವೇ ಉಳಿದಿಲ್ಲ. ಇನ್ನೂ ಅಪಾಯ ಎಂದರೆ ಕೃಷಿ ಸಂಶೋಧನೆ ಎಂಬುದು ಸಾರ್ವಜನಿಕ ಒಳಿತಿಗಿಂತ ಕಾರ್ಪೊರೇಟ್ ಒಳಿತಿನ ಕಡೆಗೆ ಹೆಚ್ಚು ಗಮನ ಕೊಡುತ್ತಿರುವುದು. ಇದು ಜಾಗತೀಕರಣದ ನಂತರದ ಬೆಳವಣಿಗೆ. ಅದರ ಫಲವೆನ್ನುವಂತೆ ಕುಲಾಂತರಿ ತಳಿಗಳು, ಜೈವಿಕ ಇಂಧನ, ಗುತ್ತಿಗೆ ಆಧಾರದ ತೋಟಗಾರಿಕೆ, ಸಂಕರ ತಳಿಗಳ ವಿಜೃಂಭಣೆ ಮತ್ತು ಅದಕ್ಕೆ ಪೂರಕವಾಗಿ ನಿರ್ಮಾಣವಾಗುತ್ತಿರುವ ಶೋಷಕ ಮಾರುಕಟ್ಟೆ. ಸಣ್ಣ, ಮಧ್ಯಮ ಮತ್ತು ಅಂಚಿನ ರೈತನಿಗೆ ಉಳಿಗಾಲವೇ ಇಲ್ಲ ಎನ್ನುವಂಥ ಸ್ಥಿತಿಯನ್ನು ಈಗಿನ ಮಾರುಕಟ್ಟೆ ಕೇಂದ್ರಿತ ಕೃಷಿ ವ್ಯವಸ್ಥೆ ನಿರ್ಮಿಸಿ ಬಿಟ್ಟಿದೆ. ಹೀಗಾಗಿ ಕೃಷಿ ಸಂಶೋಧನೆಯನ್ನು ಪ್ರಜಾಸತ್ತಾತ್ಮಕಗೊಳಿಸಲು ಮೊನ್ನೆ ಬೆಂಗಳೂರಿನಲ್ಲಿ ಒಂದು ಪ್ರಯೋಗ ನಡೆಯಿತು. ಅದು ಇಡೀ ಜಗತ್ತಿನಲ್ಲಿಯೇ ನಡೆದ ಅಂಥ ಮೊದಲ ಪ್ರಯೋಗ. ಅದಕ್ಕೆ 'ರೈತ ತೀರ್ಪು' ಎಂದು ಹೆಸರು ಇಡಲಾಗಿತ್ತು. ಕನಕಪುರ ರಸ್ತೆಯ 'ಫೈರ್‌ಫ್ಲೈಸ್'ನಲ್ಲಿ ಈ ತಿಂಗಳ ಮೊದಲ ವಾರ 'ರೈತ ತೀರ್ಪು' ಹೊರಬಿತ್ತು.

ಹೈದರಾಬಾದಿನ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ, ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರಿಸರ್ಚ್ ಅಂಡ್ ಆ್ಯಕ್ಷನ್ (ಇಕ್ರಾ) ಮತ್ತು ಹಿತ್ತಲ ಗಿಡ, ಧಾರವಾಡದ ಸೆಂಟರ್ ಫಾರ್ ಅಗ್ರಿಕಲ್ಚರಲ್ ಮೀಡಿಯಾ ಹಾಗೂ ಶಿರಸಿಯ 'ಅಪ್ಪಿಕೊ' ಸಂಘಟನೆಗಳು ಈ ಕಾರ್ಯಕ್ರಮವನ್ನು ಏರ್ಪಡಿಸಿದ್ದುವು. ಒಂದು ವರ್ಷದ ಹಿಂದೆ ಯೋಚಿಸಿದ್ದ 'ರೈತ ತೀರ್ಪು' ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ಸಿಕ್ಕಿದ್ದು ಕಳೆದ ಆರು ತಿಂಗಳಲ್ಲಿ. ರಾಜ್ಯದ ಎಲ್ಲ ಕಡೆಗಳಿಂದ ಮೂವತ್ತು ಮಂದಿ ರೈತರನ್ನು ಜ್ಯೂರಿ ಸದಸ್ಯರು ಎಂದು ಆಯ್ಕೆ ಮಾಡಲಾಗಿತ್ತು. ಇವರೆಲ್ಲ ಸಣ್ಣ, ಅತಿ ಸಣ್ಣ ಪ್ರಯೋಗಶೀಲ ರೈತರಾಗಿದ್ದರು. ಅವರಲ್ಲಿ 15 ಮಂದಿ ಮಹಿಳೆಯರು ಇದ್ದರು. ಈ ಮೂವತ್ತು ಮಂದಿಯಲ್ಲಿ ದಲಿತ, ಬುಡಕಟ್ಟು, ಆದಿವಾಸಿಯಂಥ ವರ್ಗಗಳನ್ನು ಪ್ರತಿನಿಧಿಸುವ ರೈತರೂ ಇದ್ದರು. ಕರ್ನಾಟಕದ ಒಟ್ಟು ರೈತ ಸಮುದಾಯವನ್ನು ಪ್ರತಿನಿಧಿಸುವ ಈ ಮೂವತ್ತು ಮಂದಿಯನ್ನು ಆಯ್ಕೆ ಮಾಡಲು 18–20 ಮಂದಿಯ ತಜ್ಞರ ಒಂದು ಸಮಿತಿ ರಚಿಸಲಾಗಿತ್ತು. ಒಟ್ಟು ಕಾರ್ಯಕ್ರಮದ ಸಲಹೆಗಾರ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ಇಂಗ್ಲೆಂಡಿನ ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಎನ್‌ವಿರಾನ್‌ಮೆಂಟ್ (ಐ.ಐ.ಇ.ಡಿ) ನಿರ್ದೇಶಕ ಡಾ. ಮೈಕೆಲ್ ಪಿಂಬರ್ಟ್ ಕಾರ್ಯ ನಿರ್ವಹಿಸಿದರು.

'ರೈತ ತೀರ್ಪಿನ' ವಿಶೇಷ ಏನು ಎಂದರೆ ರೈತರು ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತುದು. ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ನಡೆಸುವವರು ಅವರ ಮುಂದೆ ವಾದಿಗಳ ಹಾಗೆ ನಿಂತು ತಾವು ಮಾಡಿದ ಸಂಶೋಧನೆಯ ಉಪಯುಕ್ತತೆಯ ಬಗ್ಗೆ ಸಾಬೀತು ಮಾಡಲು ಯತ್ನಿಸಿದ್ದು. ಈ ವಾದ ಸರಿಯಾಗಿ ನಡೆದು ತೀರ್ಪು 'ನ್ಯಾಯಬದ್ಧ'ವಾಗಿ ಹೊರಬೀಳುತ್ತದೆಯೇ ಎಂಬುದರ 'ಮೇಲುಸ್ತುವಾರಿ' ಮಾಡಲು ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ನೇತೃತ್ವದಲ್ಲಿ ಡಾ.ಸುದರ್ಶನ್, ಡಾ. ದ್ವಾರಕೀನಾಥ್, ಹೇಮಲತಾ ಮಹಿಷಿ, ಡಾ. ಗೋಪಾಲ ಕಡೆಕೋಡಿ, ಬಿ.ಟಿ.ಲಲಿತಾ ನಾಯಕ್, ಡಾ.ಎಲ್.ಹನುಮಂತಯ್ಯ ಅವರಂಥ ವಿವಿಧ ರಂಗಗಳ ಘಟಾನುಘಟಿಗಳ ಸಮಿತಿಯನ್ನೂ ರಚಿಸಲಾಗಿತ್ತು.

ಆತ್ಮವಿಶ್ವಾಸವೇ ಇಲ್ಲದ, ವಿಲಾಯತಿ ದಿರಿಸು, ಇಂಗ್ಲಿಷ್ ಭಾಷೆಯ ಎದುರು ಕೀಳರಿಮೆ ಅನುಭವಿಸುವ ರೈತರು ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತು ಕೃಷಿ ಸಂಶೋಧಕರಿಗೆ ಪ್ರಶ್ನೆ ಕೇಳುವುದು ಸುಲಭ ಎಂದು ಸಂಘಟಕರೂ ಅಂದುಕೊಂಡಿರಲಿಲ್ಲ. ಮೊದಲ ದಿನ ಅದೇ ಆಯಿತು. ಆದರೆ ಮುಂದಿನ ಎರಡು ದಿನಗಳ ಕಾಲ ರೈತರು ತಮ್ಮ ಅನುಭವದಲ್ಲಿ ಕಂಡುಂಡ ಕೋಟಲೆಗಳನ್ನೆಲ್ಲ ಸಂಶೋಧಕರ ಮುಂದೆ ಎಸೆದು 'ನೀವು ಏನು ಮಾಡಿದ್ದೀರಿ ಹೇಳಿ' ಎಂದು ತರಾಟೆಗೆ ತೆಗೆದುಕೊಂಡರು. ಸಂಶೋಧಕರೂ ತಮ್ಮ ವರಸೆ ಬಿಡಲಿಲ್ಲ. ತಾವು ಏನೆಲ್ಲ ಮಾಡಿದ್ದೇವೆ ಎಂದು ಅವರೂ ಕೊಚ್ಚಿಕೊಂಡರು. ಅಂತಿಮವಾಗಿ 22 ಶಿಫಾರಸುಗಳನ್ನು ರೈತ ಜ್ಯೂರಿ ಸದಸ್ಯರು ಮಾಡಿದರು : 'ಸಾಂಪ್ರದಾಯಿಕ ಒಕ್ಕಲುತನಕ್ಕೆ ಹೊರಳಲಾಗದ, ಆಧುನಿಕ ಕೃಷಿಯನ್ನು ಮಾಡಲಾಗದ ರೈತನಿಗೆ ಅನುಕೂಲವಾಗುವ ಸಂಶೋಧನೆಗಳು ಬೇಕು, ರೈತ ತಾನೇ ತನ್ನ ಹೊಲದಲ್ಲಿ ಮಾಡುವ ಪ್ರಯೋಗಗಳಿಗೂ ಸರ್ಕಾರದ ಮನ್ನಣೆ, ಸಂಭಾವನೆ ಸಿಗಬೇಕು, ಮಿಶ್ರತಳಿ ಬೀಜಗಳಿಗೆ ಬದಲಾಗಿ ರೈತನೇ ಉತ್ಪಾದಿಸಬಹುದಾದ, ಬರ ನಿರೋಧಕ, ಪರಿಸರಕ್ಕೆ ಹೊಂದಿಕೊಳ್ಳುವ ರುಚಿಕರವಾದ ಮತ್ತು ಮೇವು ಕೊಡುವ ಜವಾರಿ ತಳಿಗಳ ಸಂಶೋಧನೆ ಆಗಬೇಕು ಇತ್ಯಾದಿ... ಇತ್ಯಾದಿ...' ಸೋಜಿಗ ಎಂದರೆ, 'ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರಗಳು ಬೇಕು' ಎಂಬ ಶಿಫಾರಸು ಕೂಡ ಇದರಲ್ಲಿ ಸೇರಿತ್ತು. ಕೃಷಿ ಇಲಾಖೆಯಲ್ಲಿ ದಶಕಗಳಿಂದ ಒಂದು ಭಾಗವೇ ಆಗಿರುವ ಮಣ್ಣು ಪರೀಕ್ಷಾ ಕೇಂದ್ರಗಳು ಬೇಕು ಎಂದು 'ರೈತ ತೀರ್ಪು' ಶಿಫಾರಸು ಮಾಡಿದ್ದು ಒಟ್ಟು ಕೃಷಿ ಸಂಶೋಧನೆಯ, ತಂತ್ರಜ್ಞಾನ ವರ್ಗಾವಣೆಯ ವೈಫಲ್ಯದ ಸಂಕೇತದಂತೆ ಇತ್ತು.

ಪಿ.ವಿ.ಸತೀಶ್, ಪಾಂಡುರಂಗ ಹೆಗಡೆ, ಸಂತೋಷ್ ಕೌಲಗಿ, ಪ್ರಕಾಶ್ ಭಟ್, ಅನಿತಾ ಪೈಲೂರು, ಡಾ.ಪಿ.ಬಾಬು ಅವರಂಥ ನೈಜ ಕಾಳಜಿಯುಳ್ಳ ಜನ ಸಂಘಟಿಸಿದ್ದ 'ರೈತ ತೀರ್ಪಿನ' ದೊಡ್ಡ ಕೊರತೆ ಎಂದರೆ ನೀತಿ ನಿರೂಪಕರು ಆ ಸಭೆಯಲ್ಲಿ ಇಲ್ಲದೇ ಇದ್ದುದು. ಈ ಕಾರ್ಯಕ್ರಮ ನಡೆದ ಮೂರು ದಿನಗಳ ಕಾಲವೂ ರೈತರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡ ಮುಖ್ಯಮಂತ್ರಿ ಯಡಿಯೂರಪ್ಪ ಅಥವಾ / ಹಾಗೂ ಕೃಷಿ ಸಚಿವರು ಭಾಗವಹಿಸಲು ಸಾಧ್ಯವಾಗಿದ್ದರೆ ತಮ್ಮ ಇಲಾಖೆ ಎಡವಿದ್ದು ಎಲ್ಲಿ ಎಂದು ಅವರಿಗೆ ತಿಳಿಯುತ್ತಿತ್ತೋ ಏನೋ?

ಹೆಡ್ಲಿ–ರಾಣಾ, ನಜೀರ್, ಯಡಿಯೂರಪ್ಪ, ರೆಡ್ಡಿಗಳ ಮಧ್ಯೆ ಎಲ್ಲಿಯೋ ಕಳೆದು ಹೋಗಿರುವ ಮಾಧ್ಯಮ 'ರೈತ ತೀರ್ಪಿಗೆ' ಕೊಡಬೇಕಾಗಿದ್ದ ಗಮನವನ್ನು ಕೊಡಲಿಲ್ಲ ಎಂಬುದು ಎರಡನೇ ಕೊರತೆ. ಚಾಮರಾಜನಗರ ರೈತರ ಮೇಲೆ ಲಾಠಿ ಬೀಸಿದ್ದು ಮಾತ್ರ ಒಂದನೇ ಪುಟದ ಸುದ್ದಿಯಾಗುವ ಕಾಲ ಇದು. ನಕಾರಾತ್ಮಕ, ರೋಚಕ ಸುದ್ದಿಗಳ ಬೆನ್ನು ಹತ್ತಿರುವ ಮಾಧ್ಯಮಗಳಲ್ಲಿ 'ರೈತ ತೀರ್ಪು' ಸುದ್ದಿಗೆ ಚೂರೇ ಚೂರು ಜಾಗ ಸಿಕ್ಕಿತು.

ರೈತನಿಗಿದು ಕಷ್ಟ ಕಾಲ. ದೇಶದಲ್ಲಿ ಕೈಗಾರಿಕಾ ಬೆಳವಣಿಗೆ ನಿರೀಕ್ಷೆಗಿಂತ ಹೆಚ್ಚು ಆಗಿದ್ದರೂ ಕೃಷಿ ಬೆಳವಣಿಗೆ ನಕಾರಾತ್ಮಕವಾಗಿಯೇ ಇದೆ. ರೈತ ಮುಳುಗಿದರೆ ದೇಶ ಮುಳುಗುತ್ತದೆ. 'ರೈತ ತೀರ್ಪಿನ' ಶಿಫಾರಸುಗಳನ್ನು ಮುಂದೆ ಇಟ್ಟುಕೊಂಡು ಸಂಘಟಕರು ಸರ್ಕಾರಗಳ ಮೇಲೆ ಹೇಗೆ ಒತ್ತಡ ತರುತ್ತಾರೆ ಎಂಬುದು ದೊಡ್ಡ ಪ್ರಶ್ನೆ. ಜಗತ್ತಿನಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ ನಡೆದ ಈ ಪ್ರಯೋಗ ಯಶ ಕಂಡು ಸರ್ಕಾರ ಮತ್ತೆ ರೈತಪರ ನಿಲುವು ತೆಗೆದುಕೊಳ್ಳುವುದು ಸಾಧ್ಯವಾದರೆ ಅದಕ್ಕಿಂತ ದೊಡ್ಡ ಯಶಸ್ಸು ಬೇರೆ ಏನೂ ಇಲ್ಲ. ಇದು ಬರೀ ಸಂಘಟಕರು ನಿರ್ಮಿಸುವ 'ಒತ್ತಡ ಗುಂಪಿನ' (pressure group)ಮೇಲೆ ಮಾತ್ರ ನಿಂತಿಲ್ಲ. ಗೋಡೆಗೆ ತಳ್ಳಿಸಿ ಕೊಂಡಿರುವ ರೈತನ ಜತೆಗೆ ಮಾಧ್ಯಮಗಳೂ ನಿಲ್ಲಬೇಕಿದೆ. ನಿಂತಾವೇ ಎಂಬುದೇ ಪ್ರಶ್ನೆ. ■




# ಕಪ್ಪು ಅರವಿಂದ

ಅರವಿಂದ ರಾಜ್‌ಖೋವಾ ಅನ್ನಿ, ರಾಜೀವ್ ರಾಜಖೋವಾ ಎನ್ನಿರಿ. ಎರಡು ಹೆಸರುಗಳಲ್ಲೂ ಸಿಹಿಯೇ ಒಸರುತ್ತದೆ. ಆದರೆ ವ್ಯಕ್ತಿಯ ಹಿನ್ನೆಲೆ ಸಿಹಿಯಾಗಿಲ್ಲ. ಅರವಿಂದ ಎಂದರೆ ತಾವರೆ ಎಂದರ್ಥ. ಅದೀಗ ಮುದುಡಿದ ತಾವರೆ– ಕಪ್ಪು ಕಮಲ! ಈ ಅರವಿಂದ ರಾಜ್‌ಖೋವಾ ನಿಷೇಧಿತ 'ಉಲ್ಫಾ' ಸಂಘಟನೆಯ ಮುಖ್ಯಸ್ಥ. 'ಉಲ್ಫಾ'ದ ಆರಂಭಿಕ ಸದಸ್ಯರಲ್ಲೊಬ್ಬ ಕೂಡ. ಕಳೆದ, ನವೆಂಬರ್ 30ರ ರಾತ್ರಿ ಬಾಂಗ್ಲಾದ ಅಧಿಕಾರಿಗಳು ಢಾಕಾ ಸಮೀಪ ರಾಜ್‌ಖೋವಾನನ್ನು ಬಂಧಿಸಿ, ಅನಂತರ ಭಾರತದ ಅಧಿಕಾರಿಗಳಿಗೆ ಹಸ್ತಾಂತರಿಸಿದ್ದಾರೆ.


ಉಲ್ಫಾ ಮುಖಂಡನ ಬದುಕಿನ ವೈರುಧ್ಯಗಳನ್ನು ನೋಡಿ: ಆತನದ್ದು ಸ್ವಾತಂತ್ರ್ಯ ಹೋರಾಟಗಾರನ ಮನೆತನ. ಖೋವಾ ಜನಿಸಿದ್ದು ಅಸ್ಸಾಂನ ಶಿವಸಾಗರ್ ಜಿಲ್ಲೆಯ ಗ್ರಾಮವೊಂದರಲ್ಲಿ, 1956ರಲ್ಲಿ. ಆತನ ತಂದೆ ಉಮಾಕಾಂತ ರಾಜ್ ಕೊನ್ವಾರ್ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿದ್ದವರು. ಮಹಾತ್ಮಗಾಂಧಿ ಬಗ್ಗೆ ಆರಾಧನಾ ಭಾವ ಹೊಂದಿದ್ದ ಉಮಾಕಾಂತರು, ಗಾಂಧಿ ಪ್ರತಿಪಾದಿಸಿದ ಅಹಿಂಸಾ ತತ್ವದ ಕಟ್ಟಾ ಅನುಯಾಯಿಯಾಗಿದ್ದರು. ಅವರ ಪತ್ನಿ ಕೂಡ ಗಾಂಧಿತತ್ವದಲ್ಲಿ ನಂಬಿಕೆಯುಳ್ಳವರು. ಇಂಥ ಕುಟುಂಬದ– ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ ದಂಪತಿಯ ಪುತ್ರ– ರಾಜ್‌ಖೋವಾಗೆ ಸ್ವಾತಂತ್ರ್ಯಗೊಂಡ ದೇಶದಲ್ಲಿ ಭಯೋತ್ಪಾದನಕ ಪಟ್ಟ, ದೇಶದ್ರೋಹಿ ಎನ್ನುವ ಹಣೆಪಟ್ಟಿ!

ಮತ್ತೊಂದು ವೈರುಧ್ಯ ವಲಸೆಗೆ ಸಂಬಂಧಿಸಿದ್ದು. ರಾಜ್‌ಖೋವಾ ಪ್ರತಿನಿಧಿಸುವ 'ಉಲ್ಫಾ'– ಅಸ್ಸಾಂ ವಿಮೋಚನಾ ಒಕ್ಕೂಟ– ವಲಸಿಗರ ವಿರುದ್ಧ ಅಸಹನೆಯುಳ್ಳ ಸಂಘಟನೆ. ಅಸ್ಸಾಂನಲ್ಲಿ ವಿದೇಶಿಗರ ವಿರೋಧಿ 'ಉಲ್ಫಾ' ಆಂದೋಲನ ನಡೆಸಿತ್ತು. ಬಾಂಗ್ಲಾದ ವಲಸಿಗರಿಂದ ಅಸ್ಸಾಂ ಘಾಸಿಗೊಳ್ಳುತ್ತಿದೆ, ತನ್ನ ಚಹರೆಯನ್ನೇ ಕಳಕೊಳ್ಳುತ್ತಿದೆ ಎನ್ನುವುದು ಖೋವಾ ವಾದ. ಅಸ್ಸಾಂನ ಬಗೆಗೆ ಕೇಂದ್ರ ಸರ್ಕಾರದ್ದು ಮಲತಾಯಿ ಧೋರಣೆ ಎನ್ನುವುದು ಆತನ ಮತ್ತೊಂದು ತಕರಾರು. ಹೀಗೆ, ವಲಸೆಯ ವಿರುದ್ಧ ಸೊಲ್ಲೆತ್ತಿದ ಸಂಘಟನೆಯ ಮುಖಂಡ ಅಕ್ರಮ ವಲಸಿಗ ಎಂದು ಬಂಧನಕ್ಕೆ ಒಳಗಾಗಿದ್ದಾನೆ!

'ಉಲ್ಫಾ' ಜನ್ಮತಳೆದದ್ದು 1979ರಲ್ಲಿ. ಸಶಸ್ತ್ರ ಸಂಘರ್ಷದಲ್ಲಿ ನಂಬಿಕೆಯುಳ್ಳ ಅದು ಅಸ್ಸಾಂನ ಪ್ರತ್ಯೇಕ ಅಸ್ತಿತ್ವಕ್ಕಾಗಿ ರಕ್ತಹರಿಸಿದೆ. 1990ರಲ್ಲಿ ಭಾರತ ಸರ್ಕಾರದಿಂದ ನಿಷೇಧಕ್ಕೊಳಗಾಗಿ 'ಭಯೋತ್ಪಾದಕ ಸಂಘಟನೆ' ಎನ್ನುವ ಹಣೆಪಟ್ಟು ಹಚ್ಚಿಕೊಂಡಿದೆ. ಪ್ರಭುತ್ವದೊಂದಿಗಿನ ಬಂಡುಕೋರರ ಸಂಘರ್ಷದಲ್ಲಿ ಕಡಿಮೆಯೆಂದರೂ ಹತ್ತು ಸಾವಿರ ಮಂದಿ ಜೀವ ಕಳಕೊಂಡಿದ್ದಾರೆ. 1990ರಲ್ಲಿ ಉಲ್ಫಾ ವಿರುದ್ಧ ಆರಂಭವಾದ ಸೇನೆಯ ಕಾರ್ಯಾಚರಣೆ ಇನ್ನೂ ಮುಗಿದಿಲ್ಲ. ಈ ಕಾರ್ಯಾಚರಣೆ ಕಾರಣದಿಂದಲೇ ರಾಜ್‌ಖೋವಾ ಅಸ್ಸಾಂನಿಂದ ತಲೆಮರೆಸಿಕೊಂಡು ಮೊದಲಿಗೆ ಭೂತಾನ್‌ನಲ್ಲಿ ಅಡಗಿಕೊಂಡ. ಅಲ್ಲಿಯೂ ಕಾರ್ಯಾಚರಣೆ ನಡೆದಾಗ ಬರ್ಮಾದಲ್ಲಿ ನುಸುಳಿದ. ಈಚಿನ ದಿನಗಳಲ್ಲಿ ಬಾಂಗ್ಲಾ ಕೂಡ ತನಗೆ ಅಪಾಯಕರ ಎಂದು ಖೋವಾಗನ್ನಿಸಿತ್ತು. ಅಲ್ಲಿಂದ ಮತ್ತೊಂದೆಡೆ ತಾವು ಬದಲಿಸುವ ಪ್ರಯತ್ನದಲ್ಲಿರುವಾಗ ಪೊಲೀಸರಿಗೆ ಸೆರೆಯಾಗಿದ್ದಾನೆ.

ಖೋವಾ ಇಂಟರ್‌ಪೋಲ್‌ಗೂ ಬೇಕಾದ ವ್ಯಕ್ತಿ. ಅಪಹರಣ, ಹತ್ಯೆ, ಕಾನೂನುಬಾಹಿರ ವಲಸೆಯ ಆಪಾದನೆಗಳು ಆತನ ಮೇಲಿವೆ. ನಕಲಿ ಪಾಸ್‌ಪೋರ್ಟ್ ಬಳಸಿ ಥಾಯ್ಲೆಂಡ್, ಭೂತಾನ್, ಪಾಕಿಸ್ತಾನ ಮುಂತಾದ ದೇಶಗಳಲ್ಲಿ ಸಂಚರಿಸಿದ್ದಾನೆ ಎನ್ನಲಾಗಿದೆ.

ಭಯೋತ್ಪಾದನಾ ಸಂಘಟನೆಗಳ ಉನ್ನತ ಅಧಿಕಾರಿಗಳು ಉತ್ತಮ ಶೈಕ್ಷಣಿಕ ಹಿನ್ನೆಲೆ ಹೊಂದಿರುವುದುಂಟು. ಆದರೆ, ಖೋವಾ ಹನ್ನೆರಡನೇ ತರಗತಿ ವೇಳೆಗಾಗಲೇ ಕಾಲೇಜಿಗೆ ನಮಸ್ಕಾರ ಹೇಳಿದ. ಕಾಲೇಜು ಕಲಿಕೆ ಅಪೂರ್ಣವಾದರೂ



ಅರವಿಂದ ರಾಜ್‌ಖೋವಾ

ಲೋಕಜ್ಞಾನದಲ್ಲಿ ಆತ ಅಸಾಧಾರಣ. ಹಲವು ಭಾಷೆಗಳನ್ನು ಬಲ್ಲ ಖೋವಾನಿಗೆ ಇಂಗ್ಲಿಷ್, ಅಸ್ಸಾಮಿ, ಬೆಂಗಾಲಿ, ನಾಗಾ ಭಾಷೆಗಳು ಸಲೀಸು. ಪರಿಣತ ಗುರಿಕಾರನಾದ ಖೋವಾ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಬಳಕೆಯಲ್ಲಿ ಪಳಗಿದವನಂತೆ.

'ಉಲ್ಫಾ' ರೂಪುಗೊಳ್ಳುವ ಮುನ್ನ ಖೋವಾ ವಿದ್ಯಾರ್ಥಿ ಸಂಘಟನೆಯೊಂದರ ನೇತಾರನಾಗಿದ್ದ. ಸ್ವಭಾವತಃ ಮೃದುಭಾಷಿಯಾದ ಆತ ಇಂಡೋ–ಬರ್ಮಾ ರೆವಲ್ಯೂಷನರಿ ಫ್ರಂಟ್‌ನ ಉಪಾಧ್ಯಕ್ಷ ಕೂಡ.

ರಾಜ್‌ಖೋವಾ ಪತ್ನಿಯ ಹೆಸರು ಕಾವೇರಿ ಕಚಾರಿ. ಗುವಾಹಟಿ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯಾಗಿದ್ದ ಕಚಾರಿ ಕಾವ್ಯದಲ್ಲಿ ಆಸಕ್ತಿಯುಳ್ಳ ಹೆಣ್ಣುಮಗಳು. ಖೋವಾನನ್ನು ಮದುವೆಯಾದ ಆಕೆ ತನ್ನ ದಾಂಪತ್ಯದ ಮೊದಲ ವರ್ಷಗಳನ್ನು ಕಳೆದದ್ದು ಅಸ್ಸಾಂ ಮತ್ತು ಭೂತಾನ್‌ನ ದಟ್ಟ ಕಾಡುಗಳಲ್ಲಿ. ಕ್ರಾಂತಿ ಹಾಗೂ ಕಾವ್ಯಮೋಹಿತ ದಂಪತಿಗೆ ಇಬ್ಬರು ಮಕ್ಕಳು. ಹದಿಮೂರು ವರ್ಷದ ಮಗಳು ಕಾಂಚನ್ ಭಾಗೀರಾಜ್ ಕೊನ್ವಾರ್, ಮಗ ಐದರ ಎಳೆಯ ಗದಾಧರ್. ಖೋವಾ ಜೊತೆಗೆ ಆತನ ಹೆಂಡತಿಮಕ್ಕಳೂ ಬಂಧನದಲ್ಲಿದ್ದಾರೆ.

ಉಲ್ಫಾದಲ್ಲಿ 'ಸರ್' ಅಥವಾ 'ಚೇರ್‌ಮನ್ ಸರ್' ಎನ್ನುವ ಗೌರವದಿಂದ ಕರೆಸಿಕೊಳ್ಳುತ್ತಿದ್ದ ಖೋವಾ ಬಂಧನದ ಬಗ್ಗೆ ಗೊಂದಲಗಳಿವೆ. ಆತ ಸೆರೆಸಿಕ್ಕನಾ? ಶರಣಾದನಾ? ಶರಣಾದ ನಂತರ ಬಂಧಿಸಲಾಯಿತಾ? ಈ ಬಗ್ಗೆ ಖೋವಾ ಪ್ರತಿಕ್ರಿಯೆ– 'ನಾನು ಶರಣಾಗಿಲ್ಲ. ಎಂದಿಗೂ ಶರಣಾಗುವುದಿಲ್ಲ. ಶರಣಾಗತರನ್ನು ನ್ಯಾಯಾಲಯಕ್ಕೆ ಕರೆತರುವಾಗ ಕೋಳ ಹಾಕುವುದಿಲ್ಲ'.

ನನ್ನ ಬಂಧನ ಅಸ್ಸಾಂನಲ್ಲಿ ನಡೆಯುತ್ತಿರುವ ಶಾಂತಿ ಪ್ರಯತ್ನಗಳಿಗೆ ಹಿನ್ನಡೆ ಉಂಟುಮಾಡಿದೆ. ಗೊಂದಲದ ಪರಿಸ್ಥಿತಿಯನ್ನು ಸೃಷ್ಟಿಸಿದೆ. ಶಾಂತಿ ನೆಲೆಸುವುದು ಕೆಲವರಿಗೆ ಬೇಕಾಗಿಲ್ಲ ಎನ್ನುವುದು ಬಂಧಿತ ಉಲ್ಫಾ ಮುಖಂಡನ ಅಳಲು.

ಅಸ್ಸಾಂನಲ್ಲೇ ಇರುವ ರಾಜ್‌ಖೋವಾ ಕುಟುಂಬ ವರ್ಗಕ್ಕೆ ಸದ್ಯದಲ್ಲೇ ಸಮಸ್ಯೆ ತಿಳಿಯಾಗುವ ಆಶಾಭಾವವಿದೆ. ಉಲ್ಫಾ ಮತ್ತು ಸರ್ಕಾರದ ನಡುವೆ ಮಾತುಕತೆ ಸಾಧ್ಯವಾಗಿ, ಅಸ್ಸಾಂನಲ್ಲಿ ಶಾಂತಿ ನೆಲೆಸುತ್ತದೆ ಎನ್ನುವ ಕನಸದು. ಈ ಕನಸಿಗೆ ಖೋವಾ ಶರಣಾಗತಿ/ಬಂಧನ ನಾಂದಿಯಾಗಲಿ ಎನ್ನುವ ಆಶಾಭಾವವನ್ನು ಖೋವಾ ಸೋದರ ಅಜೊಯ್ ವ್ಯಕ್ತಪಡಿಸಿದ್ದಾರೆ. 'ಅಗತ್ಯ ಬಿದ್ದರೆ ಮಾತುಕತೆ ಮೇಜಿಗೆ ಬರುವಂತೆ ಖೋವಾನನ್ನು ಭೇಟಿಯಾಗಿ ಒತ್ತಾಯಿಸುತ್ತೇನೆ. ನಾಡಿನ ಜನರ ಭಾವನೆಗಳನ್ನು ಹಾಗೂ ಬೇಡಿಕೆಗಳನ್ನು ಖೋವಾನಿಗೆ ಅರ್ಥ ಮಾಡಿಸುತ್ತೇನೆ. ಈ ನಿಟ್ಟಿನಲ್ಲಿ ಸರ್ಕಾರ ಮನಸು ಮಾಡಬೇಕು' ಎಂದೂ ಹೇಳಿದ್ದಾರೆ. ಅಂದಹಾಗೆ, 1986ರಿಂದ ಅವರು ತಮ್ಮ ಸೋದರನನ್ನು ಭೇಟಿಯಾಗಿಯೇ ಇಲ್ಲವಂತೆ. ಆತನ ಬಗ್ಗೆ ಮಾಧ್ಯಮದ ಮೂಲಕವಷ್ಟೇ ವಿಷಯ ತಿಳಿಯುತ್ತಿದ್ದಾರಂತೆ.


ರಾಜ್‌ಖೋವಾ ಬಂಧನ 'ಉಲ್ಫಾ' ಪಾಲಿಗೆ ದೊಡ್ಡ ಮರ್ಮಾಘಾತ. ಅಸ್ಸಾಂ ವಿಮೋಚನೆ ಹೆಸರಿನಲ್ಲಿ ಜನ ಸಾಮಾನ್ಯ ಅಸ್ಸಾಮಿಗಳನ್ನು ಆಕರ್ಷಿಸುತ್ತಿದ್ದ ಒಕ್ಕೂಟದ ಇಮೇಜು ಈಗ ಮಾಸಿದೆ. ಅದರ ಬಹುತೇಕ ಉನ್ನತ ನಾಯಕರು ಸೆರೆಮನೆಗಳಲ್ಲಿದ್ದಾರೆ. ಒತ್ತೆ ಹಣಕ್ಕಾಗಿ ಉದ್ಯಮಿಗಳ ಅಪಹರಣಗಳು, ಕೊಲೆಗಳಂಥ ಕೃತ್ಯಗಳು ಸಂಘಟನೆಯ ಧ್ಯೇಯಗಳ ಬಗ್ಗೆ ಜನರಲ್ಲಿ ಅನುಮಾನ ಮೂಡಿಸಿದೆ. ತನ್ನ ಪ್ರಾಬಲ್ಯದ ದಿನಗಳಲ್ಲಿ ಸರ್ಕಾರದೊಂದಿಗೆ ಶಾಂತಿ ಮಾತುಕತೆಗಳಿಗೆ ಹತ್ತಾರು ತಕರಾರು ತೆಗೆಯುತ್ತಿದ್ದ ಉಲ್ಫಾ, ಈಗ ಶಾಂತಿ ಮಾತುಕತೆ ಪ್ರಸ್ತಾವಕ್ಕೆ ಉತ್ಸುಕತೆಯಿಂದಿದೆ. ಆದರೆ ಬೇಡಿಕೆಗಳನ್ನು ಮಂಡಿಸುವ, ಒತ್ತಾಯಿಸುವ ಚೈತನ್ಯವನ್ನು ಕಳಕೊಂಡಿರುವ ಅದು ದುರ್ಬಲವಾಗಿ ಕಾಣಿಸುತ್ತಿದೆ.

ರಾಜ್‌ಖೋವಾ ಅವರ ತಾಯಿ ಮಿಲಿಖಿ ಬರೂವಾ ಅವರಿಗೀಗ ತೊಂಬತ್ತೊಂಬತ್ತು ವರ್ಷ. ಕೆಲ ವರ್ಷಗಳ ಹಿಂದಷ್ಟೇ ಅವರ ಪತಿ ಉಮಾಕಾಂತರು ತೀರಿಕೊಂಡಿದ್ದಾರೆ. ಉಲ್ಫಾ ತೆಕ್ಕೆಯನ್ನು ಅಪ್ಪಿಕೊಂಡ ಮಗನನ್ನು ಕೊನೆಯ ಸಲ ನೋಡಿದ್ದು ಯಾವಾಗ ಎನ್ನುವುದು ಆ ಇಳಿಜೀವಕ್ಕೆ ಮರೆತು ಹೋಗಿದೆ. ಈಗ ರಾಜ್‌ಖೋವಾ ಸೆರೆಸಿಕ್ಕಿದ್ದಾನೆ. ಮುಂದೆಂದಾದರೂ ಆಕೆ ಮಗನನ್ನು ಭೇಟಿಯಾಗುತ್ತಾರಾ? ಅಮ್ಮನ ನೋಡಲಿಕ್ಕೆಂದು ಮಗ ಬರುತ್ತಾನಾ? ಆಕೆಗೋ ಕಣ್ಣು ಮಂಜು. ಕಿವಿ ಮಂದ. ದೇಹ ಮಾತು ಕೇಳುವುದಿಲ್ಲ. ಹಾಗಾಗಿ ಮಗ ಇರುವಲ್ಲಿಗೆ ಹೋಗುವುದು ಕನಸಿನ ಮಾತು.

ನೂರರ ಹೊಸ್ತಿಲಿನ ತಾಯಿ ಮಗನನ್ನು ನೋಡುವೆನೋ ಇಲ್ಲವೋ ಎನ್ನುವ ಪ್ರಶ್ನೆಗೆ ಉತ್ತರ ಹುಡುಕುತ್ತಾ, ಕೆನ್ನೆ ಸುಕ್ಕುಗಳಲ್ಲಿ ಕಣ್ಣೀರನ್ನು ಉಪ್ಪಾಗಿಸುತ್ತ ಕೊರಗುತ್ತಿದ್ದಾಳೆ. ಆ ತಾಯಿ ಮುಖ ದಶಕಗಳಿಂದ ನಿಂತಲ್ಲಿ ನಿಲಲಾರದ ರಾಜ್‌ಖೋವಾನ ಚಿತ್ತದಲ್ಲಿ ಮೂಡುವುದು ಹೇಗೆ? ಕ್ರಾಂತಿಕಾರಿಗಳು, ಬಂಡುಕೋರರ ತಾಯಂದಿರೆಲ್ಲ ನತದೃಷ್ಟರೇ.

– ರಘುನಾಥ ಚ.ಹ.

# ತುಳು ಭಾಷೆ ಮತ್ತು ಸಂವಿಧಾನದ ಎಂಟನೇ ಪರಿಚ್ಛೇದ



ಸಾರಸ್ವತ

ಲಿಂಗದೇವರು ಹಳೆಮನೆ

ಡಿಸೆಂಬರ್ ಹತ್ತನೇ ತಾರೀಕಿನಿಂದ ಹದಿಮೂರನೇ ತಾರೀಕಿನವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯಲ್ಲಿ ನಡೆದ ತುಳು ವಿಶ್ವ ಸಮ್ಮೇಳನ ಅನೇಕ ದೃಷ್ಟಿಯಿಂದ ಗಮನ ಸೆಳೆಯಿತು. ತುಳು ಭಾಷೆ ಮತ್ತು ಸಂಸ್ಕೃತಿ ಅತ್ಯಂತ ಪ್ರಾಚೀನವಾದವುಗಳು. ಪಂಚ ದ್ರಾವಿಡ ಎಂದು ಮೊದಲಿನಿಂದಲೂ ಕರೆಯುತ್ತಾ ಬರುತ್ತಿರುವ ಪ್ರಮುಖ ದ್ರಾವಿಡ ಭಾಷೆಗಳಲ್ಲಿ ತುಳು ಭಾಷೆಯೂ ಒಂದು. ಮಿಕ್ಕ ನಾಲ್ಕು ಭಾಷೆಗಳೆಂದರೆ ಕನ್ನಡ, ತಮಿಳು, ಮಲಯಾಳಂ ಮತ್ತು ತೆಲುಗು ಭಾಷೆಗಳು. ಸುಮಾರು ಎರಡು ಸಾವಿರದ ಐದುನೂರು ವರ್ಷಗಳಷ್ಟು ಪ್ರಾಚೀನತೆಯನ್ನು ಹೊಂದಿರುವ ತುಳು ಭಾಷೆ ಮತ್ತು ಸಂಸ್ಕೃತಿ ತನ್ನ ವಿಶಿಷ್ಟ ಆಚರಣೆಗಳು, ಸಂಪ್ರದಾಯಗಳು, ವಿಧಿ ವಿಧಾನಗಳು ಮತ್ತು ವಿಶಿಷ್ಟ ಭಾಷಿಕ ಲಕ್ಷಣಗಳಿಂದಾಗಿ ಇಂದಿಗೂ ಸಂಶೋಧಕರ ದತ್ತ ಕ್ಷೇತ್ರವಾಗಿ ಹೊಸ ಹೊಸ ವಿಷಯಗಳನ್ನು ಪರಿಚಯಿಸುತ್ತಲೇ ಇದೆ. ತುಳುನಾಡು, ನುಡಿ ಮತ್ತು ಸಂಸ್ಕೃತಿ ನಮ್ಮ ನಡುವಿನ ಅನನ್ಯ ಅಸ್ತಿತ್ವ.

'ನಮ್ಮ ಜೀವನದ ಅವಧಿಯಲ್ಲಿ ಪಂಚ ದ್ರಾವಿಡಗಳಲ್ಲಿ ಒಂದಾದ ತುಳು ಭಾಷೆ ಅವಸಾನವಾಗಲು ಬಿಡುವುದಿಲ್ಲ' ಇದು ಸಮ್ಮೇಳನದಲ್ಲಿ ಭಾಗವಹಿಸಿದ್ದವರೆಲ್ಲರ ಘೋಷಣೆ. ಸರಿ ಸುಮಾರು ಏಳು ಲಕ್ಷ ಜನ ಭಾಗವಹಿಸಿದ್ದ ಈ ಸಮ್ಮೇಳನ ತನ್ನ ವಿಶಿಷ್ಟ ಸಂಸ್ಕೃತಿಯ ಪ್ರಾತ್ಯಕ್ಷಿಕೆಯ ಮೂಲಕ ಎಲ್ಲರ ಗಮನ ಸೆಳೆಯಿತು. ತುಳು ಭಾಷೆಯನ್ನು ಸರ್ವಾಂಗೀಣವಾಗಿ ಬೆಳಸಬೇಕೆಂಬ ಆಶಯ ಸಮ್ಮೇಳನದಲ್ಲಿ ಹೊರಹೊಮ್ಮಿದೆ. ಸಮ್ಮೇಳನದ ಕಡೆಯಲ್ಲಿ ಒಟ್ಟು ಹದಿನೆಂಟು ನಿರ್ಣಯಗಳನ್ನು ಅಂಗೀಕರಿಸಲಾಯಿತು. ಆ ನಿರ್ಣಯಗಳಲ್ಲಿ ಬಹು ಮುಖ್ಯವಾದುದು ತುಳು ಭಾಷೆಯನ್ನು ಭಾರತ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಿಸಬೇಕು ಎಂಬುದು. ಮಿಕ್ಕ ಕೆಲವು ನಿರ್ಣಯಗಳು ಹೀಗಿವೆ. ಈಗ ನೇತ್ರಾವತಿ ನದಿಯ ನೀರನ್ನು ಹಿಮ್ಮೊಗವಾಗಿ ಹರಿಯುವಂತೆ ಮಾಡಿ ಬಯಲು ನಾಡಿಗೆ ಹರಿಸಬೇಕೆಂಬ ಯೋಜನೆಯ ಪ್ರಸ್ತಾವ ಇದೆ. ಅದನ್ನು ಕೈಬಿಡಬೇಕು ಎಂಬುದು ಒಂದು ನಿರ್ಣಯ. ನೇತ್ರಾವತಿ ನದಿಗೆ ಅಣೆ ಕಟ್ಟುವುದರಿಂದ ಪಶ್ಚಿಮ ಘಟ್ಟ ಪ್ರದೇಶದಲ್ಲಿರುವ ಅತ್ಯಂತ ಪ್ರಶಸ್ತ ಸಸ್ಯ ಹಾಗೂ ಪ್ರಾಣಿ ಸಂಪತ್ತು ನಾಶವಾಗುವ ಭೀತಿ ಇದೆ ಎಂಬುದು ಇವರ ಆತಂಕ. ಮಂಗಳೂರು ವಿಶ್ವ ವಿದ್ಯಾಲಯದಲ್ಲಿ ಪ್ರತ್ಯೇಕ ತುಳು ಭಾಷಾ ಸಂಶೋಧನಾ ಮತ್ತು ಬೋಧನಾ ವಿಭಾಗವೊಂದನ್ನು ತೆರೆಯಬೇಕು. ದಕ್ಷಿಣ ಕನ್ನಡದಲ್ಲಿ ವಿಶೇಷ ಆರ್ಥಿಕ ವಲಯವನ್ನು ಆರಂಭಿಸುವ ಮೊದಲು ಅದು ಅಲ್ಲಿಯ ಆರ್ಥಿಕ ಬೆಳವಣಿಗೆಗೆ ಎಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದನ್ನು ಅಧ್ಯಯನ ಮಾಡಬೇಕು. ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತುಳುನಾಡು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಹೆಸರಿಡಬೇಕು. ಪ್ರತ್ಯೇಕ ರೈಲ್ವೆ ವಿಭಾಗವೊಂದನ್ನು ಮಂಗಳೂರಿನಲ್ಲಿ ತೆರೆಯಬೇಕು. ತುಳು ಭಾಷೆಯನ್ನು ಅಲ್ಪ ಸಂಖ್ಯಾತರ ಭಾಷೆ ಎಂದು ಪರಿಗಣಿಸಿ ಕೇಂದ್ರ ಸರ್ಕಾರ ಅಲ್ಪ ಸಂಖ್ಯಾತ ಭಾಷೆಗಳ ಬೆಳವಣಿಗೆಗೆ ಕೊಡುವ ಅನುದಾನವನ್ನು ಕೊಡಬೇಕು. ಹಂಪಿ ಉತ್ಸವ ಮತ್ತು ಕದಂಬ ಉತ್ಸವಗಳ ಮಾದರಿಯಲ್ಲಿ ರಾಣಿ ಅಬ್ಬಕ್ಕದೇವಿ ಉತ್ಸವವನ್ನು ಪ್ರತಿ ವರ್ಷವೂ ನಡೆಸಬೇಕು. ಡಿಸೆಂಬರ್ ಮಾಸವನ್ನು ತುಳು ಮಾಸವೆಂದು ಆಚರಿಸಬೇಕು. ಇವು ಕೆಲವು ಪ್ರಮುಖ ನಿರ್ಣಯಗಳು.

ಈ ನಿರ್ಣಯಗಳನ್ನು ಗಮನಿಸಿದಾಗ ಭಾಷಿಕ ಮತ್ತು ಸಾಂಸ್ಕೃತಿಕವಾಗಿ ಅಲ್ಲದೆ ಪ್ರಾದೇಶಿಕ ಅಭಿವೃದ್ಧಿಯ ದೃಷ್ಟಿಯಿಂದಲೂ ಇವು ಮಹತ್ವದ ನಿರ್ಣಯಗಳು. ಇದು ಅಪ್ರತ್ಯಕ್ಷವಾಗಿ ರಾಜ್ಯ ಸರ್ಕಾರಕ್ಕೆ ನೀಡಿರುವ ಎಚ್ಚರಿಕೆಯ ಗಂಟೆ ಕೂಡ. ಈ ನಿರ್ಣಯಗಳಲ್ಲಿ ಬಹಳ ಪ್ರಮುಖವಾಗಿ ಎದ್ದು ಕಾಣುವ ಅಂಶವೆಂದರೆ, ತುಳು ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಿಸಬೇಕೆಂಬ ನಿರ್ಣಯ. ಈ ಬೇಡಿಕೆ ಬಹಳ ವರ್ಷಗಳಿಂದ ಇದೆ. ಈಗ ಅದಕ್ಕೊಂದು ನಿರ್ಣಾಯಕ ಸ್ವರೂಪ ಸಿಗುವಂತೆ ಕಾಣುತ್ತಿದೆ. ಈಗಾಗಲೇ ಕೇಂದ್ರ ಕಾನೂನು ಸಚಿವರು ತುಳು ಭಾಷೆಗೆ ಎಂಟನೇ ಪರಿಚ್ಛೇದದಲ್ಲಿ ಸ್ಥಾನ ದೊರಕಿಸಿ ಕೊಡುವುದರ ಬಗ್ಗೆ ಪೂರಕವಾಗಿ ಮಾತನಾಡಿದ್ದಾರೆ.

ಭಾರತ ಸಂವಿಧಾನದ ಎಂಟನೇ ಪರಿಚ್ಛೇದ ಕೆಲವು ಭಾಷೆಗಳನ್ನು ಸೂಚಿತ ಭಾಷೆಗಳೆಂದು ಪರಿಗಣಿಸಿದೆ. ನಮಗೆ ಸ್ವಾತಂತ್ರ್ಯ ಬಂದಾಗ ಹದಿನಾಲ್ಕು ಭಾಷೆಗಳನ್ನು ಸೂಚಿತ ಭಾಷೆಗಳೆಂದು ಪಟ್ಟಿ ಮಾಡಲಾಯಿತು. ಸೂಚಿತ ಭಾಷೆಗಳೆಂದು ಅವುಗಳನ್ನು ಪಟ್ಟಿ ಮಾಡಲು ಆ ಭಾಷೆಗಳಿಗೆ ಇದ್ದ ಲಕ್ಷಣಗಳೆಂದರೆ, ಅತಿ ದೊಡ್ಡ ಜನ ಸಮುದಾಯ ಆ ಭಾಷೆಗಳನ್ನು ಮಾಡನಾಡುತ್ತಿರಬೇಕು. ಆ ಭಾಷೆಗಳಿಗೆ ಸಮೃದ್ಧವಾದ ಸಾಹಿತ್ಯ ಇರಬೇಕು. ಪ್ರಾದೇಶಿಕವಾಗಿ ಅವು ಆಡಳಿತ, ಶಿಕ್ಷಣಗಳಲ್ಲಿ ಬಳಕೆಯಾಗುತ್ತಿರಬೇಕು. ಆ ಭಾಷೆಗಳಿಗೆ ಅಧಿಕೃತ ಲಿಪಿ ಇರಬೇಕು. ಈ ಪಟ್ಟಿಗೆ 1967ರಲ್ಲಿ ಸಿಂಧಿ ಭಾಷೆಯನ್ನು ಸೇರಿಸಲಾಯಿತು. 1992ರಲ್ಲಿ ಕೊಂಕಣಿ, ಮಣಿಪುರಿ ಮತ್ತು ನೇಪಾಳಿ ಭಾಷೆಗಳು ಸೇರ್ಪಡೆಯಾದವು. ಅಲ್ಲಿಗೆ ಒಟ್ಟು ಹದಿನೆಂಟು ಭಾಷೆಗಳಾದವು. ಈ ಮಧ್ಯೆ ಇನ್ನೂ ಕೆಲವು ಭಾಷಾ ಸಮುದಾಯಗಳು ತಮ್ಮ ಭಾಷೆಗಳನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸಬೇಕೆಂಬ ಬೇಡಿಕೆಯನ್ನು ಮುಂದಿಡುವುದಕ್ಕೆ ಪ್ರಾರಂಭಿಸಿದವು. ರಾಜಕೀಯವಾಗಿ ಪ್ರಬಲವಾದ ದನಿಯನ್ನು ಎತ್ತಬಲ್ಲ ಮುಖಂಡರುಗಳು ತಮ್ಮ ಸತತ ಬೇಡಿಕೆಗಳಿಂದಾಗಿ ಕೇಂದ್ರ ಸರ್ಕಾರದ ಗಮನ ಸೆಳೆಯುವಲ್ಲಿ ಸಫಲರಾಗಿದ್ದಾರೆ. 2004ರಲ್ಲಿ ಈ ಪಟ್ಟಿಗೆ ಬೊಡೊ, ಮೈಥಿಲಿ, ಡೊಗ್ರಿ ಮತ್ತು ಸಂತಾಲಿ ಭಾಷೆಗಳು ಸೇರಿದವು. ಈಗ ಅಧಿಕೃತವಾಗಿ ಮನ್ನಣೆ ಪಡೆದಿರುವ ಸೂಚಿತ ಭಾಷೆಗಳ ಸಂಖ್ಯೆ ಇಪ್ಪತ್ತೆರಡು.

ಭಾಷೆಯ ಬಗೆಗಿನ ಜಾಗೃತಿ ಭಾರತದಲ್ಲಿ ಇಂದು ಹಿಂದೆಂಗಿಂತಲೂ ಹೆಚ್ಚು ಪ್ರಕಟವಾಗತೊಡಗಿದೆ. ಹಾಗಾಗಿ ಸದ್ಯದಲ್ಲಿ ಮೂವತ್ತೆರಡು ಭಾಷೆಗಳನ್ನು ಸೂಚಿತ ಭಾಷೆಗಳ ಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆ ಕೇಂದ್ರ ಗೃಹ ಸಚಿವಾಲಯದ ಮುಂದೆ ಇದೆ. ಈ ಕೆಲವು ಭಾಷೆಗಳನ್ನು ಅನೇಕರು ಕೇಳಿರಲಿಕ್ಕಿಲ್ಲ. ಈ ರೀತಿಯ ಭಾಷೆಗಳು ನಮ್ಮ ನಡುವೆ ಇವೆ ಎಂಬ ತಿಳುವಳಿಕೆಯೂ ಅನೇಕರಿಗೆ ಇಲ್ಲ. ಅವುಗಳಲ್ಲಿ ಕೆಲವನ್ನು ಸ್ಯಾಂಪಲ್‌ಗಾಗಿ ಇಲ್ಲಿ ಕೊಡಲಾಗಿದೆ. ಆಂಗಿಕ, ಬಂಜಾರ, ಬಾಜಿಕ, ಭೋಜಪುರಿ, ಭೋತಿಯಾ, ಬಂದೇಲ್‌ಖಂಡಿ, ಧಾಟ್ಕಿ, ಗಢವಾಲಿ, ಗುಜ್ಜಾರ್..., ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇವುಗಳಲ್ಲಿ ಕೆಲವು ಹಿಂದಿಯ ಉಪ ಭಾಷೆಗಳು. ಇನ್ನು ಕೆಲವು ಹಿಮಾಚಲ ಪ್ರಾಂತ್ಯದಲ್ಲಿ ಬಳಕೆಯಾಗುತ್ತಿರುವ ಭಾಷೆಗಳು. ಇತ್ತೀಚೆಗೆ ಹಿಮಾಚಲ ಪ್ರದೇಶ ಸರ್ಕಾರ ತನ್ನ ಅಸೆಂಬ್ಲಿಯಲ್ಲಿ ಭೋತಿಯಾ ಭಾಷೆಗೆ ಸೂಚಿತ ಭಾಷೆಯ ಸ್ಥಾನಮಾನ ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿ ನಿರ್ಣಯವನ್ನು ಕೈಗೊಂಡಿತು. ತುಳು ಭಾಷೆಗೂ ಆ ಸ್ಥಾನಮಾನ ನೀಡಬೇಕೆಂಬ ನಿರ್ಣಯವನ್ನು ಕರ್ನಾಟಕ ಸರ್ಕಾರ ವಿಧಾನ ಸಭೆಯಲ್ಲಿ ಕೈಗೊಂಡು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕಿದೆ.

ಒಂದು ಭಾಷೆಗೆ ಸೂಚಿತ ಪಟ್ಟಿಯಲ್ಲಿ ಸ್ಥಾನ ಸಿಕ್ಕಿದರೆ ಲಾಭ ಏನು? ಮೊದಲಿಗೆ ಅದಕ್ಕೊಂದು ರಾಷ್ಟ್ರಮಟ್ಟದ ಸ್ಥಾನಮಾನ ಲಭ್ಯವಾಗುತ್ತದೆ. ಇಂಥದೊಂದು ಭಾಷೆ ಇದೆ. ಅದರಲ್ಲಿ ಸಮೃದ್ಧವಾದ ಸಾಹಿತ್ಯ ಇದೆ ಎಂಬ ಅಂಶ ದೇಶದ ಜನರ ಗಮನಕ್ಕೆ ಬರುತ್ತದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಿಸುವ ಸಾಹಿತ್ಯಿಕ ಪ್ರಶಸ್ತಿಗಳ ಪಟ್ಟಿಗೆ ಅದು ಸೇರುತ್ತದೆ. ತುಳು ಭಾಷೆಯಲ್ಲಿಯೇ ಅದ್ಭುತವಾದ ಸಾಹಿತ್ಯ ಸೃಷ್ಟಿಸುತ್ತಿರುವ ಚೌಟರಂತಹ ಕಾದಂಬರಿಕಾರರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬರುವುದು ಸಾಮಾನ್ಯದ ವಿಷಯ ಅಲ್ಲ. ಹಾಗೆಯೇ ಜ್ಞಾನಪೀಠದಂತಹ ಅತ್ಯುನ್ನತ ಪ್ರಶಸ್ತಿಗೆ ಕೃತಿಗಳನ್ನು ಪರಿಶೀಲಿಸುವುದು ಈ ಸೂಚಿತ ಪಟ್ಟಿಯಲ್ಲಿರುವ ಭಾಷೆಗಳಿಂದಲೇ. ಕಳೆದ ವರ್ಷ ಕೊಂಕಣಿ ಭಾಷೆಯ ಕೃತಿಯೊಂದಕ್ಕೆ ಜ್ಞಾನಪೀಠ ಪ್ರಶಸ್ತಿ ಬಂದದ್ದು ಕೊಂಕಣಿ ಭಾಷೆ ಸೂಚಿತ ಪಟ್ಟಿಯಲ್ಲಿ ಸೇರಿದ್ದರಿಂದಲೇ. ಕೇಂದ್ರ ಸಾಹಿತ್ಯ ಅಕಾಡೆಮಿ ನಡೆಸುವ ಎಲ್ಲಾ ರೀತಿಯ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳು ಈ ಭಾಷೆಗೂ ದೊರೆಯುವಂತಾಗುತ್ತದೆ. ಕೇಂದ್ರ ಸರ್ಕಾರ ಭಾಷಾ ಬೆಳವಣಿಗೆಗೆ ನೀಡುವ ಎಲ್ಲಾ ಆರ್ಥಿಕ ನೆರವು ಕೂಡಾ ತುಳು ಭಾಷೆಗೆ ಲಭ್ಯವಾಗುತ್ತದೆ. ಈಗ ಕೇಂದ್ರ ಗೃಹ ಸಚಿವಾಲಯದ ಮುಂದೆ ಇರುವ ಅನೇಕ ಭಾಷೆಗಳಿಗೆ ಹೋಲಿಸಿದರೆ ತುಳು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಬಹು ಸಮೃದ್ಧವಾಗಿದೆ. ಕೋಟಿ ಚೆನ್ನಯ್ಯರ ಪಾಡ್ದನಗಳು, ಭೂತ ಕೋಲಗಳು, ಸಿರಿ ಮಹಾಕಾವ್ಯ, ಯಕ್ಷಗಾನದ ಪ್ರಸಂಗಗಳು, ತುಳು ನಿಘಂಟು ಮುಂತಾದುವು ಈಗಾಗಲೇ ಆ ಭಾಷೆಯ, ಸಂಸ್ಕೃತಿಯ ಮಹತ್ವವನ್ನು ಹೊರನಾಡಿಗೆ ಪರಿಚಯಿಸಿವೆ.

ಭಾಷೆಯ ಹಕ್ಕು ಮೂಲಭೂತವಾಗಿ ಆ ಭಾಷಾ ಸಮುದಾಯದ ಸಾಂಸ್ಕೃತಿಕ ಹಕ್ಕು. ಅದು ಅವರ ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ಹಕ್ಕು ಕೂಡಾ ಆಗಿರುತ್ತದೆ. ಆದ್ದರಿಂದಲೇ ಪ್ರಪಂಚದ ಎಲ್ಲಾ ಭಾಷೆಗಳನ್ನೂ ಯುನೆಸ್ಕೊ ಸರಿ ಸಮಾನ ಎಂದು ಘೋಷಿಸಿದೆ. ಒಂದು ಭಾಷೆಗೆ ಲಿಪಿ ಇರಲಿ ಇಲ್ಲದೇ ಇರಲಿ ಅದು ಸಮಸ್ಯೆ ಅಲ್ಲ. ತುಳು ಭಾಷೆಗೆ ಲಿಪಿ ಇಲ್ಲ ಎಂದು ಅದು ಯಾವುದೇ ಭಾಷೆಗಿಂತ ಕನಿಷ್ಠ ಅಲ್ಲ. ಒಂದು ಕಾಲಕ್ಕೆ ತುಳು ಭಾಷೆಗೆ ಲಿಪಿ ಇತ್ತು ಎಂದು ಪ್ರತಿಪಾದಿಸುವವರೂ ಇದ್ದಾರೆ. ಭಾರತ ಸರ್ಕಾರ ತನ್ನ ಎಂಟನೇ ಪರಿಚ್ಛೇದಕ್ಕೆ ಭಾಷೆಯನ್ನು ಸೇರಿಸುವ ಈಗಿನ ಸಂದರ್ಭದಲ್ಲಿ ಒಂದು ಭಾಷೆಗೆ ಲಿಪಿ ಇಲ್ಲದಿರುವುದನ್ನು ಗಣನೆಗೆ ತೆಗೆದುಕೊಳ್ಳುತ್ತಿಲ್ಲ. ಲಿಪಿ ಇಲ್ಲದ ಭಾಷೆಗಳು ಆಯಾ ಪ್ರಾದೇಶಿಕ ಭಾಷೆಗಳ ಲಿಪಿಯನ್ನು ತನ್ನ ಭಾಷೆಗೆ ಬಳಸಿಕೊಳ್ಳಬೇಕೆಂಬ ತತ್ವವನ್ನು ಕೇಂದ್ರ ಸರ್ಕಾರ ಅಂಗೀಕರಿಸಿದೆ. ಕರ್ನಾಟಕದಲ್ಲಿ ಕೊಡವ ಮತ್ತು ತುಳು ಭಾಷೆಗಳು ಕನ್ನಡ ಲಿಪಿಯನ್ನು ಬಳಸಿಕೊಳ್ಳುತ್ತಿವೆ.

ತುಳು ಸಮೇಳನದಲ್ಲಿ ವ್ಯಕ್ತವಾದ ಒಂದು ಅತಂಕವೆಂದರೆ, ತುಳು ಭಾಷೆಯನ್ನು ಉಳಿಸಿ, ಬೆಳೆಸುವ ಪ್ರಯತ್ನ ಮಾಡದಿದ್ದರೆ, ಅದು ಅವಸಾನ ಹೊಂದಬಹುದು ಎಂಬುದು. ಈ ಆತಂಕದಲ್ಲಿ ಹುರಳಿದೆ. ಈಗಿನ ಜಾಗತೀಕರಣದ ಸಂದರ್ಭದಲ್ಲಿ ಸಂವಹನ ಜಾಲ ಹೆಚ್ಚು ಆಧುನೀಕರಣಗೊಳ್ಳುತ್ತಿದೆ. ಈ ಆಧುನೀಕರಣ ಜಾಲದಲ್ಲಿ ಹೆಚ್ಚು ಭಾಷೆಗಳು ಹುಟ್ಟಿಕೊಳ್ಳುವುದಕ್ಕಿಂತ ಅವಸಾನಗೊಳ್ಳುವುದೇ ಹೆಚ್ಚು. ಶಕ್ತಿಯುತ ಭಾಷೆಗಳು ದುರ್ಬಲ ಭಾಷೆಗಳನ್ನು ಪಕ್ಕಕ್ಕೆ ತಳ್ಳಿ ಅವುಗಳ ಸ್ಥಾನ ಮತ್ತು ಅವಕಾಶಗಳನ್ನು ಆಕ್ರಮಿಸಿಕೊಳ್ಳುತ್ತವೆ. ಈ ಆಕ್ರಮಣ ಬಲತ್ಕಾರದ್ದಾಗಿರುವುದಿಲ್ಲ. ಶಾಂತ ಮತ್ತು ಮೌನವಾಗಿಯೇ ನಡೆಯುತ್ತಿರುತ್ತದೆ. ಅಲ್ಪಸಂಖ್ಯಾತ ಅಥವಾ ದುರ್ಬಲ ಭಾಷಾ ಸಮುದಾಯದ ಜನರು ತಮಗರಿಲ್ಲದಂತೆ ಹೆಚ್ಚು ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಶಕ್ತಿ ಇರುವ ಭಾಷೆಗಳ ಕಡೆ ಸರಿಯುವುದಕ್ಕೆ ಪ್ರಾರಂಭಿಸುತ್ತಾರೆ. ಈ ಸೂಚನೆಯ ಪ್ರಕಾರ ಇಂದು ಜಗತ್ತಿನಲ್ಲಿರುವ ಸುಮಾರು ಏಳು ಸಾವಿರ ಭಾಷೆಗಳಲ್ಲಿ ಬಹಳಷ್ಟು ಭಾಷೆಗಳು ನಿಧಾನವಾಗಿ ಕಣ್ಮರೆಯಾಗುತ್ತವೆ. ಎಲ್ಲೋ ಕೆಲವು ಹೊಸ ಭಾಷೆಗಳು ಹುಟ್ಟಿಕೊಳ್ಳುತ್ತವೆ.

ಭಾರತ ಬಹು ಜನಾಂಗೀಯ, ಬಹು ಸಂಸ್ಕೃತಿಯ ಮತ್ತು ಬಹು ಭಾಷೆಗಳ ದೇಶ. ಇಲ್ಲಿಯ ಬಹುಮುಖೀ ಸ್ವರೂಪ ಇದರ ಶಕ್ತಿ ಕೂಡ. ಈ ಶಕ್ತಿಯ ಹಿಂದೆ ಗಟ್ಟಿಯಾಗಿ ನಿಂತಿರುವುದು ಇಲ್ಲಿನ ಭಾಷೆಗಳು. ಈ ಬಹು ಭಾಷಾ ಪ್ರಪಂಚ ಅವಸಾನವಾಗದೆ ಉಳಿಯಬೇಕೆಂದರೆ ಇಲ್ಲಿನ ಭಾಷೆಗಳನ್ನು ಉಳಿಸಿಕೊಳ್ಳುವುದಷ್ಟೇ ಅಲ್ಲ, ಅವುಗಳನ್ನು ಬೆಳೆಸುವ ಪ್ರಯತ್ನವನ್ನೂ ಮಾಡಬೇಕು. ಭಾಷಾವಾರು ಪ್ರಾಂತ್ಯಗಳು ರಚನೆಗೊಂಡಾಗ ಒಂದು ಭಾಷಾ ರಾಜ್ಯದ ಒಳಗೇ ಅನೇಕ ಪ್ರಮುಖ ಭಾಷೆಗಳೂ ಸೇರಿ ಹೋಗಿವೆ. ಕರ್ನಾಟಕದ ಒಳಗೆ ತುಳು, ಕೊಡವ ಭಾಷೆಗಳು ಸೇರಿದಂತೆ. ಇಂದು ಇಂಗ್ಲಿಷ್ ಹೇಗೆ ಕನ್ನಡಕ್ಕೆ ಬೆದರಿಕೆ ಒಡ್ಡುತ್ತಿದೆಯೋ ಹಾಗೆ ಕನ್ನಡ ತುಳು ಮತ್ತು ಕೊಡವ ಭಾಷೆಗಳಿಗೆ ಬೆದರಿಕೆ ಒಡ್ಡುತ್ತಿದೆ ಎಂಬ ಅಭಿಪ್ರಾಯಬಾರದ ಹಾಗೆ ಆ ಭಾಷೆಗಳನ್ನು ಪೋಷಿಸಬೇಕಾಗಿದೆ. ತುಳು ಭಾಷೆಯನ್ನು ಶಾಲೆಯಲ್ಲಿ ಬೋಧಿಸುವ ಕೆಲಸ ಆಗಬೇಕಾಗಿದೆ. ಇವೆಲ್ಲವುಗಳಿಗೆ ಸಂವಿಧಾನಾತ್ಮಕ ಅಂಗೀಕಾರ ದೊರಕಬೇಕೆಂದರೆ ಈ ರೀತಿಯ ಭಾಷೆಗಳು ಎಂಟನೇ ಪರಿಚ್ಛೇದದ ಒಳಗೆ ಸೇರಬೇಕಾದ ಅನಿವಾರ್ಯತೆ ಇದೆ. ■